ಶ್ರೀ ಕುಮಾರ್ ಬಂಗಾರಪ್ಪ :- ನಿಮ್ಮ ಅನುಭವವನ್ನೇ ನಾನು ಕೇಳುತ್ತಿರುವುದು.

ಅಧ್ಯಕ್ಷರು :- ಚಂದ್ರಕಾಂತ್ ಬೆಲ್ಲದ್‌ರವರು ಅರ್ಜೆಂಟ್ ಎಲ್ಲೋ ಹೋಗಬೇಕಾಗಿರುವುದರಿಂದ ವರದಿಯನ್ನು ಒಪ್ಪಿಸುತ್ತಾರೆ.

10. ವರದಿಗಳನ್ನೊಪ್ಪಿಸುವುದು

(ಅ) ವಿಷಯ: 2002-03ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರ ಪತ್ರಗಳ ಸಮಿತಿಯ ವರದಿ ಮಂಡನೆ

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ (ಧಾರವಾಡ) :- ಮಾನ್ಯ ಅಧ್ಯಕ್ಷರೆ, ನಾನು 2002-2003ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಹದಿಮೂರನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :- ವರದಿಯನ್ನೊಪ್ಪಿಸಲಾಯಿತು.

(ಆ) ವಿಷಯ: ಅಂದಾಜು ಸಮಿತಿಯ ನಾಲ್ಕನೇ ವರದಿ ಮಂಡನೆ

ಶ್ರೀ ಬಿ.ಬಿ. ಶಿವಪ್ಪ (ಸಲಕೇಶಪುರ) :- ಮಾನ್ಯ ಅಧ್ಯಕ್ಷರೆ, ನಾನು ಅಂದಾಜುಗಳ ಸಮಿತಿಯ ನಾಲ್ಕನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :- ವರದಿಯನ್ನೊಪ್ಪಿಸಲಾಯಿತು.

11. ಪ್ರಶ್ನೋತ್ತರ

(ಆ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು :- ಈಗ ಪ್ರಶ್ನೋತ್ತರ ವೇಳೆ. ಎಂ.ಎಸ್. ಆತ್ಮಾನಂದರವರೇ, ನೋಡೋಣ, ಸಚಿವರು ಬರುತ್ತಾರೆ, ಅಲ್ಲೇನೋ ಬಿಜಿಯಾಗಿದ್ದಾರೆ. Let us see. Let us wait. ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯನವರೇ, ಸ್ವಲ್ಪ ತಡೆಯಿರಿ, ಕೃಷಿ ಸಚಿವರು ಎಲ್ಲಿ? ಮಂತ್ರಿಗಳು ಇನ್ನೂ ಬಂದಿಲ್ಲ. ಕರೆಯಿರಿ. ಆಮೇಲೆ ತೆಗೆದುಕೊಳ್ಳೋಣ. ಅವರನ್ನು ಕರೆಸುತ್ತೇನೆ. ಶ್ರೀಮತಿ ಅನುಸೂಯಮ್ಮ ನಟರಾಜನ್ ಬಂದಿಲ್ಲ. ಇನ್ನು ಸಂಪಂಗಿಯವರು.

ಶ್ರೀ ಎನ್. ಸಂಪಂಗಿ :- ಅಧ್ಯಕ್ಷರೆ, ಸಚಿವರು ಇಲ್ಲ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) :- ಇಲ್ಲಿ ನಾವು ಬಿಲ್‌ಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಅವರ ಕಲ್ಪನೆಯಲ್ಲೇನಿದೆ ಎಂದರೆ, 4 ಗಂಟೆ ನಂತರ ಕ್ವೊಶ್ಚನ್ ಹವರ್ ಪ್ರಾರಂಭಿಸುತ್ತೀರೆಂದು ತಿಳಿದುಕೊಂಡಿದ್ದರು. ದಿಢೀರನೆ ತಾವು ಪ್ರಾರಂಭಿಸಿದಿರಿ.

Mr. SPEAKER:- You please her me. ಬಿಲ್ಸ್ ಆದ ಮೇಲೆ ಪ್ರಶ್ನೋತ್ತರ ವೇಳೆ ಎಂದು ಹಾಕಿದ್ದೇವೆ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) :- ನಮ್ಮ ಪಟ್ಟಿ ಪ್ರಕಾರ ಹೋಗಬೇಕಲ್ಲವೇ?

ಶ್ರೀ ಶಿವಾನಂದ ಎಸ್. ಪಾಟೀಲ್ :- ಸ್ಪೀಕರ್‌ಗಿಂತ ಹೆಚ್ಚು ತಾವೇ ಆಗಿ ಬಿಡುತ್ತೀರಿ. ಅವರೇ ಹೇಳಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- ಬೆಳಿಗ್ಗೆ ಎಕ್ಸ್‌ಪ್ರೆಸ್ ಮಾಡಿದ್ದೆವು. ಲಂಚ್ ಬ್ರೇಕ್ ಆದ ಮೇಲೆ ಕ್ವೊಶ್ಚನ್ ಹವರ್ ತೆಗೆದುಕೊಳ್ಳೋಣವೆಂದು ಹೇಳಿದ್ದಿರಿ.